‘‘ಪರಸ್ತ್ರೀ ಗೌರಿಯವರನ್ನು ನಿಮ್ಮ ಮನೆಯಲ್ಲಿ ರೂಮು ಕೊಟ್ಟು ಇರಿಸಿಕೊಂಡಿರುವುದು ಬಿಲ್ಡಿಂಗಿನ ನಿಯಮಗಳಿಗೆ ವಿರುದ್ಧವಾಗಿದೆ’’ ಎಂದರೊಬ್ಬರು. ‘‘ಬಿಲ್ಡಿಂಗಿನ ಎಳೆಯ ಮಕ್ಕಳಿಗೆ ತಪ್ಪು ಸಂದೇಶ ಹರಡುತ್ತದೆ. ಲಿವಿಂಗ್ ಟುಗೆದರ್ ಸಂಬಂಧಗಳಿಗೆ ನಮ್ಮ ಬೈಲಾದ ಪ್ರಕಾರ ಅವಕಾಶ ಇಲ್ಲ. ನಿಮ್ಮದು ಕೂಡ ಲಿವಿಂಗ್ ಟುಗೆದರ್ ವ್ಯಾಪ್ತಿಯಲ್ಲಿ ಬರುತ್ತದೆ. ಆದಷ್ಟು ಬೇಗ ಅವರಿಗೆ ಬೇರೆ ಮನೆ ಹುಡುಕಲು ಹೇಳಿ’’ ಎಂದರು ಇನ್ನೊಬ್ಬರು. ‘‘ನೀವು ಹೀಗೆ ಮಾಡುವ ಮೊದಲು ಮಗಳಲ್ಲಿ ಮತ್ತು ಅಳಿಯನಲ್ಲಿ ಒಂದು ಮಾತು ಕೇಳಬಹುದಿತ್ತು’’ ಎಂದು ಸೇರಿಸಿದರು ಕೂಡ. ‘‘ಉಪ್ಪು ಹುಳಿ ತಿನ್ನುವ ಗಂಡಸು, ನೀವೇನೋ ಬನ್ನಿ ಎಂದು ಕರೆದಿರಬಹುದು, ಆ ಹೆಂಗಸು ಬರುವ ಮೊದಲು ಸ್ವಲ್ಪ ಯೋಚಿಸಬೇಕಿತ್ತು’’ ಎಂದರು ಮತ್ತೊಬ್ಬರು.

ಸ್ವಲ್ಪ ಹೊತ್ತು ಇದನ್ನೆಲ್ಲ ಕೇಳಿಸಿಕೊಂಡ ಜೀಕೆ, ಆಮೇಲೆ ಸಹನಾ ಶಕ್ತಿ ಕಳೆದುಕೊಂಡು ಕೋಪದಿಂದ ಎದ್ದು, ‘‘ಅದು ನನ್ನ ಮನೆ, ಸದ್ಯಕ್ಕೆ ಅವರು ನನ್ನ ಗೆಸ್ಟ್. ಅತಿಥಿಯೊಬ್ಬರನ್ನು ನನ್ನ ಮನೆಗೆ ಬನ್ನಿ ಎಂದು ಕರೆಯುವ ಹಕ್ಕು ನನಗಿದೆ. ಇದಕ್ಕೆ ಯಾವ ದೊಣ್ಣೇರಾಯನ ಒಪ್ಪಿಗೆಯ ಅಗತ್ಯ ಇಲ್ಲ. ಇಲ್ಲೇ ಇದೇ ಬಿಲ್ಡಿಂಗಿನಲ್ಲಿ ಕೆಲವು ವರ್ಷಗಳ ಕಾಲ ಬದುಕಿದ ಒಂಟಿ ಹೆಂಗಸಿನ ಮೇಲೆ ಮನುಷ್ಯತ್ವ ಇದ್ದವರು ಹೀಗೆ ಆರೋಪ ಮಾಡುವುದಿಲ್ಲ. ಈ ವಠಾರದಲ್ಲಿಯೇ ಸೂಕ್ತವಾದ ಮನೆ ಹುಡುಕುತ್ತಿದ್ದಾರೆ, ಸಿಕ್ಕಿದಾಗ ಹೋಗುತ್ತಾರೆ. ಇದರಿಂದ ಯಾರಿಗಾದರೂ ಹೇಗೆ ಸಮಸ್ಯೆಯಾಗುತ್ತೆ? ಸಮಸ್ಯೆಯಾದವರು ಧೈರ್ಯ ಇದ್ದರೆ ನನ್ನಲ್ಲಿ ಬಂದು ಹೇಳಲಿ, ಸೂಕ್ತ ಉತ್ತರ ಕೊಡುತ್ತೇನೆ’’ ಎಂದು ಆವೇಶದಿಂದ ಮೇಜು ಗುದ್ದಿ ಹೇಳಿಬಂದಿದ್ದರು. ಮನೆಯಲ್ಲಿ ಗೌರಿಯ ಎದುರು ಏನೂ ನಡೆದೇ ಇಲ್ಲ ಎಂಬಂತೆ ಜೀಕೆ ವರ್ತಿಸಿದರೂ ಗೌರಿಯವರಿಗೆ ಈ ಸುದ್ದಿ ತಿಳಿದು ಹೋಯಿತು. ಮನನೊಂದ ಗೌರಿ ತಕ್ಷಣದಲ್ಲಿ ಸಿಕ್ಕಿದ ಮನೆಯೊಂದನ್ನು ಬಾಡಿಗೆ ಪಡೆದು ಅಲ್ಲಿಗೆ ಶಿಫ್ಟ್ ಮಾಡಿದ್ದರು. ಶಿಫ್ಟಿಂಗಿನಲ್ಲಿ ನೆರವಾಗುತ್ತ ಜೀಕೆ ಗೌರಿಯವರ ಹೊಸ ಮನೆಗೂ ಕೆಲವಾರು ಬಾರಿ ಹೋಗಿ ಬಂದಿದ್ದರು. ಜೀಕೆ ಗೌರಿಯವರ ಹೊಸಮನೆಗೂ ಹೋಗುತ್ತಿದ್ದಾರೆ ಎಂಬ ಸುದ್ದಿಯನ್ನೂ ನಾಲ್ಕಾರು ದಿನ ಹರಿಯಬಿಡಲಾಗಿತ್ತು. ಜೀಕೆಯವರಿಗೆ ಬಿಲ್ಡಿಂಗಿನವರ ಸಣ್ಣತನದ ಬಗ್ಗೆ ಜಿಗುಪ್ಸೆ ಹುಟ್ಟಿತ್ತು. ಇಷ್ಟು ಸಮಯ ಒಳ್ಳೆಯ ವಾತಾವರಣ ಇದ್ದ ಬಿಲ್ಡಿಂಗಿನಲ್ಲಿ ಅದೇನು ವಿಷಗಾಳಿ ಹೊಕ್ಕಿತು ಎಂದು ಆಶ್ಚರ್ಯ ಪಟ್ಟಿದ್ದರು. ಮಡದಿಯ ಮರಣಾನಂತರ ಏಕಾಏಕಿ ಹೀಗೆ ಎಲ್ಲರೂ ತನ್ನ ವಿರುದ್ಧವೇ ಯಾಕೆ ಕತ್ತಿ ಮಸೆಯುತ್ತಿದ್ದಾರೆ ಎಂಬುದು ಮಾತ್ರ ಅವರಿಗೆ ಅರ್ಥವಾಗಿರಲಿಲ್ಲ.

ಇದೀಗ ಪುನಃ ಹೊಸತಾಗಿ ಯಾಕೆ ಕರೆದಿದ್ದಾರೆ? ತೀರಾ ಇತ್ತೀಚೆಗೆ ನಡೆದ ವಿದ್ಯಮಾನ ಎಂದರೆ ತಾನು ಹೋಗಿ ಕಷ್ಟದಲ್ಲಿದ್ದ ಮಗಳನ್ನು ಗಂಡನ ಮನೆಯಿಂದ ಪಾರು ಮಾಡಿದ್ದು. ಮನೆಗೆ ಬಂದ ಮಲ್ಲಿಕಾ ಯಾರಲ್ಲಾದರೂ ಜಗಳವಾಡಿದಳೇ?

ಕಮಿಟಿಯವರು ತನ್ನ ಬಗ್ಗೆ ಮಾತನಾಡುವ ಮೊದಲೇ, ‘‘ನಾನು ನನ್ನದೇ ಸಮಸ್ಯೆಗಳ ಸುಳಿಯಲ್ಲಿದ್ದೇನೆ. ಇನ್ನು ನಿಮ್ಮದೇನು ಅಂತ ಹೇಳಿ. ನನ್ನ ಸಹನೆಯ ಕಟ್ಟೆ ಒಡೆಯುವ ಮಾತು ಯಾರಾದರೂ ಆಡಿದರೆ ನನ್ನ ರೌದ್ರಾವತಾರ ನೋಡಬೇಕಾದೀತು ಎಚ್ಚರಿಕೆ’’ ಎಂದೇ ಹೇಳುವುದೆಂದು ನಿಶ್ಚಯ ಮಾಡಿಕೊಂಡು ಕಮಿಟಿಯೆದುರು ಹಾಜರಾಗಲು ಜೀಕೆ ಹೊರಟು ಬಂದರು.

‘‘ತುಂಬ ಮಂದಿ ಬಂದು ಕಂಪ್ಲೇಂಟ್ ಕೊಟ್ಟಿದ್ದಾರೆ. ಎಲ್ಲ ವಿವರಿಸುವುದು ಬೇಡ ಅನ್ನಿಸುತ್ತೆ. ನಿಮ್ಮ ಮಗಳು ಮತ್ತು ಅಳಿಯರ ನಡುವೆ ಏನೋ ಮನಸ್ತಾಪ ಉಂಟಾಗಿದೆಯಂತೆ. ಹಿರಿಯರಾಗಿ ನೀವು ಇಬ್ಬರೊಡನೆ ಕುಳಿತು ಸಮಸ್ಯೆ ಬಗೆಹರಿಸಲು ಪ್ರಯತ್ನ ಮಾಡಬೇಕೇ ವಿನಃ ಸಿನಿಮೀಯ ಶೈಲಿಯಲ್ಲಿ ಹೋಗಿ ಮಗಳನ್ನು ಕರೆದು ತರುವುದು, ಡೈವೋರ್ಸ್ ನೋಟಿಸು ಕೊಡಿಸುವುದು ಸರಿಯಲ್ಲ. ಡೈವೋರ್ಸ್ ಆದ ಹೆಂಗಸು ಅಂದರೆ ಭೂಷಣವೇ? ಯಾವುದೇ ಚಿಂತೆ ಆಕೆಯ ಮುಖದಲ್ಲಿಲ್ಲ.